**ಇಂದು ದಿನಾಂಕ : *19.10.2022* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : 1(ಎ) ಮತ್ತು 3 ರಿಂದ 5 ನೇ ಪ್ರತಿವಾದಿ ಪರ ಶ್ರೀ. ಎಸ್.ಎಸ್.ಜಿ.ವಕೀಲರಿಂದಃ**

ನನ್ನ ತಂದೆಗೆ ವಯಸ್ಸಾಗಿದ್ದು, ಅವರ ತಲೆಗೆ ತೆಂಗಿನ ಕಾಯಿ ಬಿದ್ದಿದ್ದು ಶಸ್ತ್ರ ಚಿಕಿತ್ಸೆ ಸುಮಾರು 3 ತಿಂಗಳ ಹಿಂದೆ ಆಗಿತ್ತು. ಅದರ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ನಿ.ಪಿ.1 ಅನ್ನು ನನ್ನ ತಂದೆ ಹೇಳಿ ಬರೆಸಿರುತ್ತಾರೆ. ನಾನು ಓದಿ ತಿಳಿದುಕೊಂಡಿದ್ದೇನೆ. ನಿ.ಪಿ.01 ರಲ್ಲಿ ತೆಂಗಿನ ಕಾಯಿ ಬಿದ್ದ ವಿಷಯ ಬರೆಸಿಲ್ಲ, ಸಾಕ್ಷಿ ಅವರಿಗೆ ವಯೋ ಸಹಜ ಕಾಯಿಲೆ ಇದೆ ಎಂದು ನುಡಿಯುತ್ತಾರೆ. ನನ್ನ ತಂದೆ ಓಡಾಡಿಕೊಂಡು ಆರೋಗ್ಯವಾಗಿ ಇದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಹೊರ ಬರುತ್ತದೆ ಎಂದು ಸುಳ್ಳು ನಿ.ಪಿ.01 ಅನ್ನು ಸೃಷ್ಟಿಸಿ ನಾನು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆ ಯನ್ನು ಹಾಕಲು ವಕೀಲರಿಗೆ ನನ್ನ ತಂದೆ ಮಾಹಿತಿ ಕೊಟ್ಟಿದ್ದಾರೆ. ದಾವೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ನಾವು ಒಟ್ಟು ಕುಟುಂಬದಲ್ಲಿ ಇರುವ ಕಾರಣ ನನಗೆ ಮಾಹಿತಿ ಇರುತ್ತದೆ.

ಒಂದು ಕುಟುಂಬ ಒಂದೇ ಮನೆಯಲ್ಲಿ ವಾಸವಿದ್ದರೆ ಅದರ ಪಡಿತರ ಚೀಟಿ, ಮತದಾರರ ಚೀಟಿ , ಅಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ಒಂದೇ ವಿಳಾಸದಲ್ಲಿ ಇರುತ್ತದೆ ಎಂದರೆ ಸರಿ. ಅವುಗಳನ್ನು ನಾನು ಹಾಜರು ಪಡಿಸಿಲ್ಲ. ವಾದ ಪತ್ರದಲ್ಲಿ ಬರೆದಿರುವ ಅಂಶಗಳು ಗೊತ್ತು. ನಿ.ಪಿ.01 ರಲ್ಲಿ ನನ್ನ ಮಗನಿಗೆ ಎಲ್ಲಾ ವಿಷಯ ತಿಳಿಸಿ ಜಿ.ಪಿ.ಎಫ್ ಕೊಡುತ್ತಿದ್ದೇನೆ ಎಂದು ಬರೆದಿದೆ. ನಾನು ಪಿ.ಯು.ಸಿ. ಓದಿದ್ದೇನೆ. ಎಲ್ಲರೂ ವಾಸವಿರುವ ಮನೆಯ ನಂ. 1 ಆಗಿರುತ್ತದೆ. ನಾವೆಲ್ಲ ಮನೆ ನಂ. 1 ರಲ್ಲಿ ವಾಸವಿದ್ದೇವೆ ಎಂದು ವಾದ ಪತ್ರದಲ್ಲಿ ಬರೆದಿದೆ. ಮನೆ ನಂ. 1 ಅನ್ನು ದಾವೆಯಲ್ಲಿ ಸೇರಿಸಿಲ್ಲ.

ದಾವೆಯಲ್ಲಿ ಪ್ರತಿವಾದಿಯರು ಏನು ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ನನ್ನ ತಂದೆ ಹಾಜರು ಪಡಿಸಿರುವ ದಾಖಲೆಗಳ ಬಗ್ಗೆ ತಿಳಿದುಕೊಂಡಿದ್ದೇನೆ. ನನ್ನ ತಂದೆ 7 ನೇ ತರಗತಿಯವರೆಗೆ ಓದಿದ್ದಾರೆ. ನಿ.ಪಿ. 9 ಕ್ಕೆ ವಿಭಜನೆ ಎಂದು ನಮೂದು ಇದೆ ಎಂದರೆ ಸರಿ.

ಸ.ನಂ. 12/1 ಬಿ ನಮ್ಮ ಕುಟುಂಬದ ಜಮೀನು ಎಂದರೆ ಸರಿ. ಸಾಕ್ಷಿಗೆ ಸ.ನಂ. 12/1 ಬಿ ಜಮೀನಿನ ಪಹಣಿಯ ದೃಢೀಕೃತ ನಕಲನ್ನು ತೋರಿಸಿದ್ದು ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿರುವ ಕಾರಣ ನಿ.ಡಿ. 01 ಎಂದು ಗುರುತಿಸಲಾಯಿತು. ನಿ.ಡಿ. 1 ರಲ್ಲಿ ಹಿಸ್ಸೆ ಎಂ.ಆರ್.24/98-99 ಎಂದು ನಮೂದು ಇದೆ ಎಂದರೆ ಸರಿ, ಆದರೆ ಸಾಕ್ಷಿ ಅದರ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದು ನುಡಿಯುತ್ತಾರೆ. ನಿ.ಡಿ.1 ರಲ್ಲಿ ನಮೂದು ಇರುವ ಹಿಸ್ಸೆ ಬಗ್ಗೆ ವಾದ ಪತ್ರದಲ್ಲಿ ನನ್ನ ತಂದೆ ಯಾಕೆ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಅದು ಅವರ ಗಮನಕ್ಕೆ ಬಂದಿಲ್ಲ ಎಂದು ನುಡಿಯುತ್ತಾರೆ.

ಸ.ನಂ. 12/1 ಬಿ ಜಮೀನಿನಲ್ಲಿ ನನ್ನ ತಂದೆ ಹಿಸ್ಸೆಗೆ 8 ಗುಂಟೆ ಜಮೀನು ಇರುವುದಿಲ್ಲ. ಅದು ನನ್ನ ತಂದೆಯ ಸಹೋದರರ ಹೆಸರಿನಲ್ಲಿದೆ, ಅದರೆ ಖಚಿತವಾಗಿ ಯಾರ ಹೆಸರಿನಲ್ಲಿದೆ ಗೊತ್ತಿಲ್ಲ. ಸಾಕ್ಷಿಗೆ ಸ.ನಂ.12/1 ಸಿ ಜಮೀನಿನ ಪಹಣಿಯ ದೃಢೀಕೃತ ನಕಲನ್ನು ತೋರಿಸಿದ್ದು ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿರುವ ಕಾರಣ ನಿ.ಡಿ. 02 ಎಂದು ಗುರುತಿಸಲಾಯಿತು. ನಿ.ಡಿ. 02 ರಲ್ಲಿ ಎಂ.ಆರ್.24/98-99 ಸ್ವಂತ ಎಂದು ನಮೂದು ಇದೆ ಎಂದರೆ ಸರಿ. ಸದರಿ ಜಮೀನಿನ ಪಹಣಿ ಇವತ್ತಿಗೂ ನನ್ನ ತಂದೆ ಹೆಸರಿನಲ್ಲಿದೆ ಎಂದರೆ ಸರಿ. ನಿ.ಡಿ.2 ರಲ್ಲಿ ನನ್ನ ತಂದೆ ಹೆಸರಿನಲ್ಲಿ ಖಾತೆ ಮತ್ತು ಸ್ವಾಧೀನದಲ್ಲಿದೆ ಎಂದು ನಮೂದು ಇದೆ ಎಂದರೆ ಸರಿ .

ಸಾಕ್ಷಿಗೆ ಸ.ನಂ. 16/1 ಜಮೀನಿನ ಪಹಣಿಯ ದೃಢೀಕೃತ ನಕಲನ್ನು ತೋರಿಸಿದ್ದು ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿರುವ ಕಾರಣ ನಿ.ಡಿ. 03 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸ.ನಂ. 12/3 ಜಮೀನಿನ ಪಹಣಿಯ ದೃಢೀಕೃತ ನಕಲನ್ನು ತೋರಿಸಿದ್ದು ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿರುವ ಕಾರಣ ನಿ.ಡಿ. 04 ಎಂದು ಗುರುತಿಸಲಾಯಿತು. ನಿ.ಡಿ. 04 ರಲ್ಲಿ ಹಿಸ್ಸೆ ಮೇರೆಗೆ ಖಾತೆಯಾಗಿದೆ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಅದು ತಪ್ಪಾಗಿ ನಮೂದು ಇದೆ ಎಂದು ನುಡಿಯುತ್ತಾರೆ. ಅದು ಕ್ರಯಕ್ಕೆ ಪಡೆದಿರುವ ಜಮೀನು ಅದರಲ್ಲಿ ಕ್ರಯ ಎಂದು ಬರಬೇಕಾಗಿತ್ತು. ಅದರೆ ತಪ್ಪಾಗಿ ಹಿಸ್ಸೆ ಎಂದು ಬಂದಿರುತ್ತದೆ. ಅದನ್ನು ಬಸಪ್ಪ ರವರ ಕಡೆಯಿಂದ ಪಿ.ವಸಂತ ರಾಜೇ ಅರಸ್ ರವರು ಖರೀದಿ

ಮಾಡಿರುತ್ತಾರೆ. ಅದರ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ಸದರಿ ವಿಷಯವನ್ನು ದಾವೆಯಲ್ಲಿ ನನ್ನ ತಂದೆ ಬರೆಸಿಲ್ಲ. ಸದರಿ ವಿಷಯವನ್ನು ನಾನು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸ.ನಂ. 13 ಜಮೀನಿನ ಪಹಣಿಯ ದೃಢೀಕೃತ ನಕಲನ್ನು ತೋರಿಸಿದ್ದು ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿರುವ ಕಾರಣ ನಿ.ಡಿ. 05 ಎಂದು ಗುರುತಿಸಲಾಯಿತು. ನಿ.ಡಿ. 5 ರಲ್ಲಿ ಹಿಸ್ಸೆ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಅದು ತಪ್ಪಾಗಿ ಆಗಿದೆ ಎಂದು ನುಡಿಯುತ್ತಾರೆ. ಅದರಲ್ಲಿ ಪವತಿ ಖಾತೆ ಎಂದು ಬರಬೇಕಾಗಿತ್ತು ಆದರೆ ಹಿಸ್ಸೆ ಎಂದು ಬಂದಿದೆ. ನಿ.ಡಿ. 5 ರ ಜಮೀನು ಖರೀದಿ ಮಾಡಲು ನನ್ನ ತಂದೆಗೆ ಹಣ ಎಲ್ಲಿಂದ ಬಂತು ನನಗೆ ಗೊತ್ತಿಲ್ಲ. ನಾನು ದಾವೆಯ ಸಂಪೂರ್ಣ ಮಾಹಿತಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ಸ.ನಂ. 8/4 ಜಮೀನಿನ ಪಹಣಿಯ ದೃಢೀಕೃತ ನಕಲನ್ನು ತೋರಿಸಿದ್ದು ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿರುವ ಕಾರಣ ನಿ.ಡಿ. 06 ಎಂದು ಗುರುತಿಸಲಾಯಿತು. ನಿ.ಡಿ. 6 ರಲ್ಲಿ ಹಿಸ್ಸೆ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಅದು ತಪ್ಪಾಗಿ ಆಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಸ.ನಂ. 9 ಜಮೀನಿನ ಪಹಣಿಯ ದೃಢೀಕೃತ ನಕಲನ್ನು ತೋರಿಸಿದ್ದು ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿರುವ ಕಾರಣ ನಿ.ಡಿ. 07 ಎಂದು ಗುರುತಿಸಲಾಯಿತು. ನಿ.ಡಿ.7 ರಲ್ಲಿ ಹಿಸ್ಸೆ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಅದು ತಪ್ಪಾಗಿ ಆಗಿದೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಸ.ನಂ. 12/1ಎ , ಸ.ನಂ. 8/1 , ಸ.ನಂ. 8/3, ಸ.ನಂ. 14 , ಸ.ನಂ. 15, ಸ.ನಂ.144/2ಎ , ಸ.ನಂ.12ರ ಜಮೀನಿನ ಪಹಣಿಯ ದೃಢೀಕೃತ ನಕಲನ್ನು ತೋರಿಸಿದ್ದು ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿರುವ ಕಾರಣ ನಿ.ಡಿ. 08 ರಿಂದ 14 ಎಂದು ಗುರುತಿಸಲಾಯಿತು. ನಿ.ಡಿ.08 ರಿಂದ 14 ರಲ್ಲಿ ಹಿಸ್ಸೆ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಅದು ತಪ್ಪಾಗಿ ಆಗಿದೆ ಎಂದು ನುಡಿಯುತ್ತಾರೆ. ನಾವು ಯಾವತ್ತೂ ಯಾರಿಗೂ ಸುಳ್ಳು ಪತ್ರ ಬರೆದುಕೊಡುವ ಅಭ್ಯಾಸ ಇಲ್ಲ. ಯಾವುದಾದರೂ ದಾಖಲೆ ಬರೆದರೆ ಅದನ್ನು ಓದಿ ತಿಳಿದುಕೊಂಡು ಸಹಿ ಮಾಡುವ ಅಭ್ಯಾಸ ವಿದೆ.

ಯಾರಿಗಾದರೂ ದಾಖಲೆ ಮಾಡುವಾಗ ಅದನ್ನು ಬರೆಸಿ ಓದಿ ತಿಳಿದುಕೊಂಡು ಸಹಿ ಮಾಡುವ ಅಭ್ಯಾಸ ವಿದೆ. ಸ.ನಂ. 144/2 ಎ ವಿಸ್ತೀರ್ಣ 23 ಗುಂಟೆ ಜಮೀನು ಈಗ ನಮ್ಮ ತಂದೆಯ ಹೆಸರಿನಲ್ಲಿ ಖಾತೆ ಇಲ್ಲ ಎಂದರೆ ಸರಿ. ಸದರಿ ಜಮೀನು ಈಗ ಬಾರ್ಸೆ ಕಲ್ಲೆಗೌಡ ರವರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿ. ದಿಃ 07.04.1996 ರಲ್ಲಿ ಸದರಿ ಜಮೀನನ್ನು ನನ್ನ ತಂದೆ ಬಾರ್ಸೆ ಕಲ್ಲೆಗೌಡರರಿವರಿಗೆ 10 ಸಾವಿರ ರೂ ಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ತಂದೆಯವರು ಹೇಳುತ್ತಿದ್ದರು ಅದರೆ ನನಗೆ ಅಷ್ಟು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ತಂದೆ ಇಬ್ಬರೂ ಸೇರಿ ಸದರಿ ಜಮೀನನ್ನು ಮಾರಾಟ ಮಾಡಿದ್ದೇವೆ ಎಂದರೆ ಸಾಕ್ಷಿಯು ಅಷ್ಟು ನಾನು ಗಮನ ಹರಿಸಿಲ್ಲ ಅಷ್ಟು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದಲ್ಲಿ ಸದರಿ ಕ್ರಯಪತ್ರದ ವಿಷಯ ಹೇಳಿದ್ದಾರೆ ಎಂದರೆ ಸರಿ. ಸದರಿ ಕ್ರಯಪತ್ರ ಸುಳ್ಳು ಕ್ರಯಪತ್ರ ಆಗಿದೆ ಎಂದು ಕಲ್ಲೆಗೌಡನ ಮೇಲೆ ಇಲ್ಲಿಯವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನನಗೆ ಮತ್ತು ನನ್ನ ತಂದೆಗೆ ಯಾವುದೇ ಕೆಟ್ಟ ಚಟಗಳು ಇಲ್ಲ. ಕ್ರಯದ ಹಣವನ್ನು ನಾನು ಮತ್ತು ನನ್ನ ತಂದೆ ಬಳಸಿಕೊಂಡಿದ್ದೇವೆ ಎಂದು ಗೊತ್ತಿಲ್ಲ. ನಾನು ಮತ್ತು ನನ್ನ ತಂದೆ ಉಪನೊಂದಾಣಾಧಿಕಾರಿಯವರ ಕಛೇರಿಗೆ ಹೋಗಿ ಸದರಿ ಕ್ರಯಪತ್ರಕ್ಕೆ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ಕ್ರಯಪತ್ರ ಬರೆದುಕೊಟ್ಟಿದ್ದರೂ ಸಹ ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ 50 ವರ್ಷ ವಯಸ್ಸು. 1996 ರಲ್ಲಿ ನನಗೆ ಸುಮಾರು 24 ವರ್ಷ ವಯಸ್ಸು. ಸದರಿ ಜಮೀನನ್ನು ಮನೆ ಖರ್ಚಿಗೆ ಮತ್ತು ಎತ್ತು ಖರೀದಿಸಲು ಮಾರಾಟ ಮಾಡಲಾಗಿದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನನ್ನ ತಂದೆಗೆ ಮೇಲೆ ನಂಬಿಕೆ ಇದೆ. ಸಾಕ್ಷಿಗೆ ದಿಃ 07.04.1996 ರ ಕ್ರಯಪತ್ರದ ದೃಢೀಕೃತ ನಕಲು ತೋರಿಸಿದ್ದು ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ ಕಾರಣ ನಿ.ಡಿ. 15 ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***